# ಸಮನ್ವಯತೆ, ವಿಶೇಷ ಅಗತ್ಯಗಳು ಹಾಗೂ ಚಿಂತನಶೀಲ ಶಿಕ್ಷಕರು

ಅನುರಾಧ ನಾಯ್ಡು

**ಪ್ರಸ್ತಾವನೆ**

ತರಗತಿಯಲ್ಲಿನ ಪ್ರತಿಯೊಂದು ಮಗುವನ್ನೂ, ಭಾವನಾತ್ಮಕವಾಗಲಿ, ಆರೋಗ್ಯದ ವಿಷಯದಲ್ಲಾಗಲಿ, ಪುನಶ್ಚೇತನದ ಸಂದರ್ಭದಲ್ಲಾಗಲಿ, ಸ್ಪಂದಿಸಿ, ಸಂತೈಸುವುದರಲ್ಲಿ ಶಿಕ್ಷಕರೇ ಮೊದಲ ವ್ಯಕ್ತಿಗಳು. ಆಧುನಿಕ ತರಗತಿ ಕೊಠಡಿಯಲ್ಲಿ ಬಳಸುವ 'ವಿವಿಧತೆ' ಎಂಬುದರ ಅರ್ಥ ವ್ಯಾಪ್ತಿಯೊಳಗೆ ವಿಶೇಷ ಅಗತ್ಯವನ್ನು ಹೊಂದಿದ ಮಕ್ಕಳು, ವೈಕಲ್ಯವುಳ್ಳವರು, ವಲಸಿಗರ ಮಕ್ಕಳು, ಕಡುಬಡವರ ಮಕ್ಕಳು, ಏಕಾಂಗಿ ಪೋಷಕರ ಮಕ್ಕಳು, ದತ್ತು ಪಡೆದ ಮಕ್ಕಳು, ತೀವ್ರ ಕಾಯಿಲೆಯಲ್ಲಿರುವ ಪೋಷಕರ ಮಕ್ಕಳು ಹಾಗೂ ವಿಶೇಷ ಗಮನದ ಅಗತ್ಯವುಳ್ಳ ಇನ್ನೂ ಅನೇಕ ರೀತಿಯ ಮಕ್ಕಳು ಸೇರುತ್ತಾರೆ. ಇಂತಹ ಎಲ್ಲ ಬಗೆಯ ಮಕ್ಕಳನ್ನೂ ಒಳಗೊಳ್ಳಿಸಿಕೊಳ್ಳುವ ಬಹು ಆಯಾಮಗಳ ಪಾತ್ರಕ್ಕೆ ಶಿಕ್ಷಕರನ್ನು ಸಿದ್ಧಪಡಿಸುವ ಬಗ್ಗೆ ಸೇವಾಪೂರ್ವ ಶಿಕ್ಷಕ ತರಬೇತಿಯು ಗಮನ ವಹಿಸಬೇಕು.

**ಸಮನ್ವಯ ಮತ್ತು ವೈವಿಧ್ಯ**

ಯುನೆಸ್ಕೋ ಪ್ರಕಾರ ಸಮನ್ವಯವೆಂದರೆ ಮಕ್ಕಳ ಹಾಜರಿ, ಭಾಗವಹಿಸುವಿಕೆ ಹಾಗೂ ಸಾಧನೆಗಳಿಗೆ ಮಿತಿಯನ್ನು ಹೇರುವ ಅಡೆತಡೆಗಳನ್ನು ನಿವಾರಿಸಲು ಮಕ್ಕಳಿಗೆ ನೆರವಾಗುವ ಒಂದು ಪ್ರಕ್ರಿಯೆ. ಯುನೆಸ್ಕೋದ ಪ್ರಕಾರ ಹೊರಭಾಗದಲ್ಲೇ ಉಳಿದು ಬಿಡುವ ಸಾಧ್ಯತೆಯಿರುವ ಮಕ್ಕಳೆಂದರೆ ತೀರಾ ಬಡಕುಟುಂಬದವರು, ವಿಶಿಷ್ಟ ಧಾರ್ಮಿಕ, ಸಾಂಸ್ಕೃತಿಕ ಅಥವಾ ಜನಾಂಗೀಯ ಗುಂಪಿನ ಮಕ್ಕಳು, ಆದಿವಾಸಿ ಸಮುದಾಯದ ಮಕ್ಕಳು, ಅಥವಾ ವೈಕಲ್ಯವುಳ್ಳ ವಿಶೇಷ ಅಗತ್ಯ ಬೇಕಾದ ಮಕ್ಕಳು. ಕಲಿಕೆಯಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ತಡೆಯುವ ವಿಷಯಗಳು ಭೌತಿಕವಿರ-ಬಹುದು, ತಾಂತ್ರಿಕವಾಗಿರಬಹುದು, ಆರ್ಥಿಕವಾಗಿರಬಹುದು, ಅಥವಾ ದೃಷ್ಟಿಕೋನಕ್ಕೆ ಸಂಬಂಧಿಸಿದ್ದಾಗಿರಬಹುದು, ಇಲ್ಲವೇ ಮಕ್ಕಳನ್ನು ಶಾಲೆಯಲ್ಲಿ ಇರಿಸಿಕೊಳ್ಳಲು ಆಗದೇ ಇರುವ ಶಾಲೆಗಳ ಅಸಾಮರ್ಥ್ಯವೂ ಆಗಿರಬಹುದು. ಸಮನ್ವಯ ಶಿಕ್ಷಣವು ಮಾನವ ವೈವಿಧ್ಯತೆಗಳನ್ನು ಸ್ವೀಕರಿಸುವ ದೃಢವಾದ ಬದ್ಧತೆಯುಳ್ಳ ಒಂದು ಪ್ರಕ್ರಿಯೆ ಎಂದು ಐನ್ಸ್ಕೋ, ಹಾಗೂ ಬೂತ್ ಅವರು ವಿವರಿಸುತ್ತಾರೆ. ಅವರ ಪ್ರಕಾರ, ಶಾಲೆಗಳು ತಮ್ಮ ವಿದ್ಯಾರ್ಥಿಗಳ ವೈವಿಧ್ಯತೆಯನ್ನು ಮೆಚ್ಚಿಕೊಂಡಾಗ ಮಕ್ಕಳೊಳಗಿರುವ ಮೌಲ್ಯಗಳನ್ನೂ ಗುರುತಿಸಲು ಪ್ರಾರಂಭಿಸುತ್ತಾರೆ. ವಿದ್ಯಾರ್ಥಿಗಳ ವೈವಿಧ್ಯತೆಗೆ ಒತ್ತು ಕೊಡುವುದೆಂದರೆ, ಶಾಲೆಗಳು ವಿದ್ಯಾರ್ಥಿಗಳನ್ನು ಸಮ್ಮಿಶ್ರ ಕಲಿಕಾ ಗುಂಪುಗಳಲ್ಲಿ ಪರಸ್ಪರ ಸಹಕಾರದಿಂದ ಸಕ್ರಿಯವಾಗಿ ಒಗ್ಗೂಡಿ ಕಲಿಯುವುದಕ್ಕೆ ಅವಕಾಶ ಕೊಡುತ್ತವೆ ಎಂದೇ ಅರ್ಥ. ಎಲ್ಲಾ ಬಗೆಯ ವಿದ್ಯಾರ್ಥಿಗಳನ್ನೂ ಒಳಗೊಳಿಸಿಕೊಳ್ಳುವ ಶಾಲೆಗಳ ಈ ಪ್ರಕ್ರಿಯೆಯು ಇಡೀ ಸಮುದಾಯದ ಹಂತಕ್ಕೆ ವ್ಯಾಪಿಸಿ ತಾರತಮ್ಯದ ಎಲ್ಲಾ ವಿಧಾನಗಳನ್ನೂ ಮತ್ತು ಪ್ರತ್ಯೇಕತೆಗಳನ್ನೂ ಅಲ್ಲಗಳೆದಂತೆ ಆಗುತ್ತದೆ. (ಐನ್ಸ್ಕೋ, ಬೂತ್ ಹಾಗೂ ಡೈಸನ್, 2006). 'ಸಮನ್ವಯ ಶಿಕ್ಷಣ' ಎಂಬ ಈ ಪರಿಭಾಷೆ ಇತ್ತೀಚೆಗೆ ರೂಪುಗೊಂಡಿದ್ದು, ಈಗ ಸಾಮಾನ್ಯ ಶಾಲೆಗಳಲ್ಲಿಯೂ ಪ್ರಾರಂಭವಾಗಿರುವ ವಿಶೇಷ ಅಗತ್ಯದ ಶಿಕ್ಷಣಕ್ಕೆ ಸಮನಾಗಿದೆ. ಸಮಾನ ಹಕ್ಕು ಅವಕಾಶಗಳಿಗಾಗಿ ನಡೆದ ವಿಶೇಷ ಅಗತ್ಯವುಳ್ಳವರ ವ್ಯಾಪಕ ಆಂದೋಲನದ ಹಿನ್ನೆಲೆಯಲ್ಲಿ ಅಂತಹವರಿಗಾಗಿ ಪ್ರತ್ಯೇಕ ಶಾಲೆಗಳನ್ನು ನಡೆಸುವುದೂ ಸಮರ್ಪಕವಲ್ಲ ಎಂಬ ತಿಳುವಳಿಕೆ ಉಂಟಾಗಿ ಒಳಗೊಳ್ಳುವ ವ್ಯವಸ್ಥೆ ಜಾರಿಗೆ ಬಂದಿತು. ಈ ಹೊಸ ಅಗತ್ಯಕ್ಕೆ ಶಾಲೆಗಳು ಹೊಂದಿಕೊಳ್ಳಬೇಕೆಂಬ ಬೇಡಿಕೆ ಹುಟ್ಟಿಕೊಂಡು, ಅದಕ್ಕನುಸಾರವಾಗಿ ಶಿಕ್ಷಕರ ತರಬೇತಿಯಲ್ಲಿ ಬದಲಾವಣೆಯ ನಿರೀಕ್ಷೆಯನ್ನು ಹೆಚ್ಚಿಸಿದೆ. ಈಗ ಒಳಗೊಳ್ಳುವ ಶಿಕ್ಷಣವೆಂದರೆ ಕೇವಲ ವೈಕಲ್ಯದ ವಿಚಾರಕ್ಕೆ ಸೀಮಿತವಾಗದೆ ವಿವಿಧ ಸಾಂಸ್ಕೃತಿಕ, ಆರ್ಥಿಕ ಹಾಗೂ ಜನಾಂಗೀಯ ಹಿನ್ನೆಲೆಗಳುಳ್ಳ ಎಲ್ಲ ರೀತಿಯ ದುರ್ಬಲ ಗುಂಪುಗಳ ಮಕ್ಕಳನ್ನೂ ಒಳಗೊಳ್ಳುವಂಥದ್ದು ಎಂದು ಗುರುತಿಸಲಾಗಿದೆ. ಇಂತಹ ಒಂದು ಒಳಗೊಳ್ಳುವ ತರಗತಿಯಲ್ಲಿ ಶಿಕ್ಷಕರು ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಸೇವಾಪೂರ್ವ ಶಿಕ್ಷಕರ ಶಿಕ್ಷಣ ತರಬೇತಿಗೆ ಹೊಸ ಪರಿಕಲ್ಪನೆಯನ್ನು ಒದಗಿಸುವುದು ಸಾಧ್ಯ. ಇಂತಹ ತರಬೇತಿಯು ಸೂಕ್ಷ್ಮ ಒಳನೋಟದಿಂದ ಅಭ್ಯರ್ಥಿಗಳಿಗೆ ಆತ್ಮಾವಲೋಕನಕ್ಕೆ ಅವಕಾಶ ಒದಗಿಸಿ ಕೆಲಸದ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸವನ್ನೂ, ಸ್ಥೈರ್ಯವನ್ನೂ ಅಥವಾ ತಮ್ಮದೇ ಆದ ಪ್ರಭಾವದ ಬಗ್ಗೆ ನಂಬಿಕೆಯನ್ನು ಪಡೆಯುವುದಕ್ಕೆ ನೆರವಾಗಬೇಕು. ವೈಕಲ್ಯಗಳಿರುವ ಮಕ್ಕಳ ಸಹಿತ ವಿವಿಧ ಹಿನ್ನೆಲೆಯಿಂದ ಬರುವ ಮಕ್ಕಳೊಂದಿಗೆ ಹಾಗೂ ಅವರ ಕುಟುಂಬಗಳೊಂದಿಗೆ ಸಂವಹನ ಮಾಡುವ ಅವಕಾಶವು ಶಿಕ್ಷಕರಿಗೆ ತಮ್ಮ ಮನಸ್ಸನ್ನು ತೆರೆದು ಮಕ್ಕಳ ಜಗತ್ತಿನೊಳಗೆ ನೋಡಲು ಹಾಗೂ ತಮ್ಮ ನಂಬಿಕೆಗಳ ಪ್ರಪಂಚದಲ್ಲಿ ಕಟ್ಟಿಕೊಂಡ ಪೂರ್ವಾಗ್ರಹಗಳನ್ನು ಕತ್ತರಿಸಿಹಾಕಲು ಅನುವು ಮಾಡುತ್ತದೆ. ಶಿಕ್ಷಕರ ತರಬೇತಿಯಲ್ಲಿ ಆವಿಷ್ಕಾರವೇ ಕಲಿಕೆಯ ಹೃದಯವಾಗಬೇಕು; ವಿವಿಧ ಪ್ರದೇಶಗಳಲ್ಲಿ ವಿಶೇಷ ಅಗತ್ಯವುಳ್ಳವರ ಸೌಲಭ್ಯಗಳ ಕುರಿತಾದ ಹೋರಾಟಗಾರರ ಹಾಗೂ ಪ್ರತಿಪಾದಕರ ಜೊತೆಗೆ ಸಂವಾದಗಳನ್ನು ಏರ್ಪಡಿಸಬೇಕು; ಇದು ದೀರ್ಘಾವಧಿಯ ಪರಿಣಾಮ ಉಂಟು ಮಾಡುವುದಲ್ಲದೆ ಪ್ರಸ್ತುತ ಶಿಕ್ಷಣದಲ್ಲಿರುವ ನೈಜ ಸವಾಲುಗಳನ್ನು ಕಣ್ಣೆದುರು ನಿಲ್ಲಿಸುತ್ತದೆ.

ಇತ್ತೀಚಿನ ದಶಕಗಳಲ್ಲಿ ಅನೇಕ ಮಂದಿ ವಿಶೇಷ ಅಗತ್ಯವುಳ್ಳವರು ತಮ್ಮ ಕಾರ್ಯಗಳ ಮೂಲಕ ಸಮಾಜದಲ್ಲಿ ವೈಕಲ್ಯವುಳ್ಳವರನ್ನೂ ಒಳಪಡಿಸಿಕೊಳ್ಳುವ ಮನೋ-ಭಾವವನ್ನು ಸೃಷ್ಟಿಸುವ ಮೂಲಕ ಬದಲಾವಣೆಯ ಹರಿಕಾರರೆನಿಸಿ ಆದರ್ಶ ಮಾದರಿಗಳಾಗಿದ್ದಾರೆ. ಸಮಾಜದ ಮುಖ್ಯ ವಾಹಿನಿಯಲ್ಲಿ ಅರಿವಿನ ಸೇತುವೆಯನ್ನು ಕಟ್ಟಲು ವಿಶೇಷ ಅಗತ್ಯವುಳ್ಳವರ ಹಕ್ಕುಗಳ ಪ್ರತಿಪಾದಕರು ಮಾದರಿಯಾದ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಎರಡೂವರೆ ದಶಕಗಳಿಂದ ಈ ಹೋರಾಟದಲ್ಲಿ ಕಾರ್ಯ ಪ್ರವೃತ್ತರಾಗಿರುವ ಪ್ರಸಿದ್ಧ ಜಾವೇದ್ ಅಬಿದಿ ಅವರ ಅವಿರತ

ಪ್ರಯತ್ನಗಳ ಫಲವಾಗಿ ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಹಕ್ಕುಗಳ ಕಾಯಿದೆ (2016) (Rights of Persons with Disability Act - 2016) ಅಂಗೀಕಾರವಾಯಿತು. ವಿಶೇಷ ಅಗತ್ಯವುಳ್ಳವರ ಹಕ್ಕುಗಳಿಗಾಗಿ ಹೋರಾಡುವ ಮತ್ತೊಬ್ಬ ಉಲ್ಲೇಖನೀಯ ವ್ಯಕ್ತಿ ಅಂಜಲಿ ಅಗರ್ವಾಲ್, ವಿಶೇಷ ಅಗತ್ಯವುಳ್ಳವರಿಗೆ ಸಮಾಜದಲ್ಲಿ ಹೆಚ್ಚಿನ ಸೌಲಭ್ಯಗಳಿಗಾಗಿ ಭಾರತ ಸರಕಾರದ ಮಟ್ಟದಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ. ಇತ್ತೀಚೆಗೆ ಸ್ಮಿತಾ ಸದಾಶಿವನ್ ಅವರು ವಿಶೇಷ ಅಗತ್ಯವುಳ್ಳವರ ಮತದಾನದ ಹಕ್ಕಿಗೆ ಚ್ಯುತಿಯಾಗದಂತೆ, ಮತ್ತು ಅವರ ಮತಗಳನ್ನೂ ಪರಿಗಣಿಸುವಂತೆ ಭಾರತದ ಚುನಾವಣಾ ಆಯೋಗದೊಂದಿಗೆ ವ್ಯವಹರಿಸಿ ಯಶಸ್ವಿಯಾಗಿದ್ದಾರೆ. ಕೊನೆಯದಾಗಿ ಭಾವನಾ ಬೊಟ್ಟ ಅವರು ಅಂತರ್ಜಾಲದಲ್ಲಿ "ಕನೆಕ್ಟ್ ಸ್ಪೆಶಲ್" ('Connect Special') ಎಂಬ ವಾರ್ತಾ ಪತ್ರವೊಂದನ್ನು ಪ್ರಕಟಿಸುತ್ತಿದ್ದು ವೈಕಲ್ಯವುಳ್ಳವರ ಸೌಲಭ್ಯಗಳ ಪರ ಪ್ರತಿಪಾದಿಸುವವರಿಗೆ ಹೊಸ ವಿಚಾರಗಳನ್ನೂ ಆಲೋಚನೆಗಳನ್ನೂ ತಲುಪಿಸುತ್ತಿದ್ದಾರೆ.

ಈ ಆದರ್ಶಪ್ರಾಯ ಹೋರಾಟಗಾರರಿಂದ ಸೇವಾಪೂರ್ವ ಶಿಕ್ಷಕ ತರಬೇತಿ ಹೊಂದುತ್ತಿರುವವರು ಮಾತ್ರವಲ್ಲದೆ ಎಲ್ಲಾ ಶಿಕ್ಷಕರೂ ಅರಿಯಬೇಕಾದುದು ಇದೆ. ಶಿಕ್ಷಣವು ಎಲ್ಲವನ್ನೂ ವ್ಯಾಪಿಸುವ ಗುಣವನ್ನು ಹೊಂದಿರುವುದರಿಂದ ವಿಶೇಷ ಅಗತ್ಯಗಳನ್ನು ಹೊಂದಿರುವ ಜನರ ಜೀವನಾನುಭವಗಳಿಂದ ಸೇವಾಪೂರ್ವ ಶಿಕ್ಷಕರ ತರಬೇತಿಯನ್ನೂ ಸಮೃದ್ಧಗೊಳಿಸಲು ಸಾಧ್ಯವಿಲ್ಲವೇ?

**21ನೇ ಶತಮಾನದಲ್ಲಿ ಆತ್ಮಾವಲೋಕನ ಹಾಗೂ ಬೋಧನೆ:**

ಒಬ್ಬನು ಆಲೋಚಿಸುವ ಕುರಿತು ಯೋಚಿಸಿದಾಗ ಅವನು ತನ್ನ ಆಲೋಚನೆಯ ಬಗ್ಗೆ ಮಾತ್ರವಲ್ಲದೆ ಆಲೋಚಿಸುವ ಪ್ರಕ್ರಿಯೆಯ ಕುರಿತೂ ಅರಿವು ಹೊಂದುತ್ತಾನೆ/ಳೆ. ಡೆಕಾರ್ಟ್‌ನ ಪ್ರಖ್ಯಾತ ಉಲ್ಲೇಖ "ನಾನು ಯೋಚಿಸುತ್ತೇನೆ, ಆದ್ದರಿಂದಲೇ ನಾನು ಇದ್ದೇನೆ" (I think, therefore I am') ಎಂಬುವುದು ಆತ ತನ್ನ ಅಸ್ತಿತ್ವಕ್ಕೆ ತನ್ನ ಆಲೋಚನೆಯನ್ನೇ ಸಾಕ್ಷಿ ಎಂದು ಪರಿಗಣಿಸಿದ್ದನೆಂದು ಸೂಚಿಸುತ್ತದೆ. ಸ್ವಂತಿಕೆಯ ಕೇಂದ್ರ ಬಿಂದುವೇ ಈ ರೀತಿಯ ಚಿಂತನಶೀಲ ಆಲೋಚನೆ, ಮತ್ತು ಮನುಷ್ಯನನ್ನು ಮನುಷ್ಯತ್ವ ಉಳ್ಳವನನ್ನಾಗಿ ಮಾಡುವುದೂ ಇದೇ ಆಲೋಚನೆಯೇ. ಈ ಆಲೋಚನೆಯಲ್ಲಿರುವ ಮನುಷ್ಯತ್ವದ ಅಂಶವನ್ನು ತರಗತಿ ಕೊಠಡಿಯಲ್ಲಿ ಕೆಲಸಕ್ಕೆ ಉಪಯೋಗಿಸಬಹುದೇ? ಬಹು ವಿಧದ ವಿದ್ಯಾರ್ಥಿಗಳ ಅಪಾರ ಸಾಧ್ಯತೆಗಳುಳ್ಳ ಒಂದು ಇಸ್ಪೀಟು ಎಲೆಗಳ ಕಟ್ಟು ದೊರೆತ ಶಿಕ್ಷಕರು ತಮ್ಮ ಆಟದ ಗೆಲುವಿನ ಸಾಧ್ಯತೆಯನ್ನು ಆಕಸ್ಮಿಕವೆಂದು ಪರಿಗಣಿಸಬಾರದು.

ಇಂದು ಸೆಲ್‌ಫೋನ್‌ಗಳು ಹಾಗೂ ಅಂತರ್ಜಾಲ ತಂತ್ರಜ್ಞಾನದ ವ್ಯಾಪಕ ಬಳಕೆಯಿಂದಾಗಿ ತರಗತಿಯೇ ಕಲಿಯುವ ಜಾಗ ಮತ್ತು ಶಿಕ್ಷಕನು ಎಲ್ಲಾ ಜ್ಞಾನಗಳನ್ನೂ ಹೊಂದಿರುವ ನಡೆದಾಡುವ ಪುಸ್ತಕ ಭಂಡಾರವೆಂಬ ಕಲ್ಪನೆಗೆ ಸವಾಲು ಎದುರಾಗಿದೆ. ಒಂದು ಪುಟ್ಟ ಮಗುವು ಕೂಡಾ ಇಂದು ಸ್ಮಾರ್ಟ್‌ಫೋನ್‌ನ ಗುಂಡಿ ಒತ್ತಿ ತನಗೆ ಇಷ್ಟವಾದ ಯೂಟ್ಯೂಬ್‌ನ ವೀಡಿಯೋ ನೋಡಲು ಶಕ್ತವಾಗಿದೆ. ವಿದ್ಯಾರ್ಥಿಗಳು ಅಂತರ್ಜಾಲದಿಂದ ಮಾಹಿತಿಯನ್ನು ತಿಳಿಯುವಲ್ಲಿ ಹೆಚ್ಚು ಪ್ರವೀಣರಾಗುತ್ತಿದ್ದಂತೆ, ಡಿಜಿಟಲ್ ತಂತ್ರಜ್ಞಾನದ ಮೂಲಕ ಮನೆಯಲ್ಲೇ ಮಾಹಿತಿ ಸಂಚಯನವಾಗುತ್ತಿರುವುದರಿಂದ ಶಿಕ್ಷಕರು 'ವಿದ್ಯಾರ್ಥಿ ಕೇಂದ್ರಿತ ತರಗತಿ ಕೊಠಡಿಯು ಹಿಮ್ಮೊಗವಾಗಿದೆ' (student-centric flipped classroom) ಎಂದು ಮಾತನಾಡಿ–ಕೊಳ್ಳುತ್ತಿದ್ದಾರೆ. ಈ ಪ್ರವೃತ್ತಿಗಳು ಪ್ರಪಂಚ ಬದಲಾಗುತ್ತಿದ್ದು ಕಲಿಕೆಯಲ್ಲಿ ವೈವಿಧ್ಯತೆ ಉಂಟಾಗಿರುವ ಸೂಚನೆಯಾಗಿದೆ.

**ಮುಂದಿನ ದಾರಿ ಶಿಕ್ಷಕರ ಆತ್ಮಾವಲೋಕನವೇ?**

1990ರ ದಶಕದಲ್ಲಿ ಶಿಕ್ಷಕರು ತರಗತಿ ಕೊಠಡಿಯ ಕಾರ್ಯಕ್ರಮದ ಕುರಿತು ನಡೆಸಿದ ಸಂಶೋಧನೆಯು, ಶಿಕ್ಷಕ ತನ್ನ ಪಾತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದ್ದರೆ ನಿರಂತರ ಆತ್ಮಾವಲೋಕನ ಹಾಗೂ ಚಿಂತನೆಯ ಮೂಲಕ ಉಂಟಾಗುವ ಆತ್ಮವಿಮರ್ಶೆ ಅಗತ್ಯ ಎಂಬುದನ್ನು ತೋರಿಸಿದೆ. ಬೋಧನೆಯ ಕುರಿತಾದ ಜ್ಞಾನವನ್ನು ರೂಪಿಸುವುದರಲ್ಲಿ ಶಿಕ್ಷಕರ ಪಾತ್ರ ಪ್ರಧಾನ ಎಂದು 1980ರ ದಶಕದಲ್ಲೇ ಐಸ್ನರ್ ಅವರು ಹೇಳಿದರು (ಐಸ್ನರ್ 1985). ಜ್ಞಾನದ ಸೃಷ್ಟಿಯಲ್ಲಿ ಪ್ರಧಾನ ಪಾತ್ರವಹಿಸುವ ಆತ್ಮಾವಲೋಕನವು ಕಾರ್ಯಮಗ್ನವಾಗಿರುವಾಗಿನ ಆಲೋಚನೆ ಹಾಗೂ ಕಾರ್ಯದ ಕುರಿತಾಗಿನ ಆಲೋಚನೆ ಇವೆರಡನ್ನೂ ಒಳಗೊಂಡಿದೆ. ಇದರಲ್ಲಿ ಮೊದಲನೆಯದರ ಬಗ್ಗೆ ಹೇಳುವುದಾದರೆ ಓರ್ವ ಕಾರ್ಯಪ್ರವೃತ್ತರಾಗಿದ್ದಾಗ ನಿರಂತರ ಆಲೋಚಿಸುತ್ತಾ ಕ್ರಿಯಾಶೀಲವಾಗಿರುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಚಿಂತನೆಯು ಹೆಚ್ಚು ಸಮರ್ಥ ಕಾರ್ಯಮಗ್ನತೆಗೆ ಕಾರಣವಾಗುತ್ತದೆ. (ಶಾನ್, 1983). ಚಿಂತನಾತ್ಮಕ ಬೋಧನೆಯೆಂದರೆ ಶಿಕ್ಷಕರು ತಮ್ಮ ಪಾಠವನ್ನು, ಬೋಧನೆಯ ವಿಧಾನ ಹಾಗೂ ಅದರ ಫಲಿತಾಂಶವನ್ನು ವಿಶ್ಲೇಷಣೆಗೆ ಒಳಪಡಿಸಿ, ಅದರಿಂದ ಹೊರಬರುವ ಫಲಿತಾಂಶವನ್ನು ಹಾಗೂ ಒಳನೋಟವನ್ನು ವಿಶ್ಲೇಷಣೆಗೆ ಹಾಗೂ ಒಳನೋಟವನ್ನು ವಿದ್ಯಾರ್ಥಿಗೆ ಬೋಧನೆಯ ಅನುಭವವು ವೃದ್ಧಿಯಾಗುವಂತೆ ಉಪಯೋಗಿಸುವುದು. ಹಾಬ್ಸನ್ ಅವರು ಈ ಪ್ರಕ್ರಿಯೆಯನ್ನು "ತನ್ನದೇ ಪ್ರಯಾಣದ ಶಿಕ್ಷಕಿಯ ಕತೆ" ಎಂದು ವರ್ಣಿಸುತ್ತಾರೆ. ಇದನ್ನು "ಶಿಕ್ಷಕರಾಗಿ ಜೀವನದ ಬಗೆಗಿನ ಅನುಭವಾತ್ಮಕ ಒಳನೋಟ" ಎಂದೂ ಅವರು ಹೇಳುತ್ತಾರೆ. (ಬರ್ನಾರ್ಫೋರ್ಡ್, ಫಿಶರ್ ಮತ್ತು ಹಾಬ್ಸನ್ 2001). ಹೀಗಾಗಿ ಈ ಪ್ರಕ್ರಿಯೆಯಲ್ಲಿ ಶಿಕ್ಷಕರ ಆತ್ಮಾವಲೋಕನ ಅಥವಾ ಸ್ವವಿಮರ್ಶೆಯು ಆವರ್ತನಾ ಸ್ವರೂಪದ್ದಾಗಿದ್ದು ಪದೇಪದೇ ನಡೆಯುವಂತಹದ್ದಾಗಿದೆ. ತನ್ನನ್ನು ತಾನು ನಿರ್ಭಾವುಕತೆಯಿಂದ ಪರಿಶೀಲಿಸಿಕೊಳ್ಳಲು ಅವರು ಮತ್ತೆ ಮತ್ತೆ ಅಲ್ಲಿಗೇ ಬಂದು ಕಾರ್ಯಮಗ್ನರಾಗುತ್ತಾರೆ.

**ಸಮನ್ವಯ ಮತ್ತು ಆತ್ಮಾವಲೋಕನದ ಶಿಕ್ಷಕ/ಕಿ**

ಒಂದು ಸಮನ್ವಯ ತರಗತಿಯಲ್ಲಿರುವ ಆತ್ಮಾವಲೋಕನ ಮಾಡುವ ಪ್ರತಿಯೊಬ್ಬ ಶಿಕ್ಷಕ/ಕಿಯೂ ಕಲಿಕೆಗೆ ಸಹಾಯ ಮಾಡುವ, ಪುನಶ್ಚೇತನದ ಮಾರ್ಗೋಪಾಯಗಳನ್ನು ತಿಳಿಸಿಕೊಡುವ ಸ್ನೇಹಿತ /ತೆಯಾಗಿ, ಜೀವನದ ವಿದ್ಯೆಗಳನ್ನು ಕಲಿಸಿಕೊಡುವ ಮಾರ್ಗದರ್ಶಕ/ಕಿಯಾಗಿ ಹಾಗೂ ಉತ್ಸಾಹವನ್ನು ತುಂಬುವ ಪ್ರೇರಕ/ಕಿಯಾಗಿ ಕೆಲಸ ಮಾಡುತ್ತಾರೆ. ಸದಾಕಾಲ ಗಮನದ ಕೇಂದ್ರಬಿಂದುವಾಗಿ, ಅತ್ಯುನ್ನತ ಅಧಿಕೃತತೆ ಉಳ್ಳವರಾಗಿ, ಎಲ್ಲರೂ ಪರಿಹಾರಕ್ಕೆ ಎದುರು ನೋಡುವ ಆಕರ ಕೋಶವಾಗಿ, ಎಲ್ಲರನ್ನೂ ಒಳಗೊಳಿಸಿಕೊಂಡೇ ಮುನ್ನಡೆಯಬೇಕಾದ ಅವರ ನಿಜರೂಪವೇ ಬಾಹ್ಯದಲ್ಲೂ ಪ್ರತಿಬಿಂಬಿತವಾಗಿರಬೇಕಾಗುತ್ತದೆ. ಆತ/ಕೆ ವಿದ್ಯಾರ್ಥಿಯ ಬೆಳವಣಿಗೆಗೆ ದಾರಿಯನ್ನು ತೋರಿಸುವ ಆದರ್ಶ ವ್ಯಕ್ತಿ ಮಾತ್ರವಲ್ಲದೆ ತನ್ನ ಬೋಧನೆ ಹಾಗೂ ಮಾರ್ಗದರ್ಶನದ ಪರಿಧಿಯೊಳಗೆ ವಿವಿಧ ಹಿನ್ನೆಲೆಗಳಿಂದ ಬಂದ ಎಲ್ಲಾ ಮಕ್ಕಳನ್ನೂ ಒಳಪಡಿಸಿಕೊಳ್ಳುವ ನೈತಿಕ ಜವಾಬ್ದಾರಿಯನ್ನೂ ಹೊಂದಿದ್ದಾನೆ/ಳೆ.

ಇಲ್ಲಿ ಆಧುನಿಕ ಭಾರತದ ಒಂದು ಮಾದರಿ ನಗರ ಪ್ರದೇಶದ ಶಾಲೆಯಲ್ಲಿ ಕಲಿಯುತ್ತಿರುವ ವಿವಿಧ ಹಿನ್ನೆಲೆಗಳ ಪ್ರಾತಿನಿಧಿಕ ರೂಪದಲ್ಲಿ ಕಾಣಿಸುವ ಕೆಲವು ಮಕ್ಕಳ ಯಶೋಗಾಥೆಗಳಿವೆ. ಇವೆಲ್ಲವೂ ನಿಜ ಜೀವನದ ಕಥೆಗಳಾಗಿದ್ದು, ಆ ಮಕ್ಕಳಿಗೆ ತಮ್ಮ ಶಿಕ್ಷಕರಿಂದ ಮುಕ್ತ ಸ್ವಾಗತವನ್ನೂ ತಮ್ಮ ಮಕ್ಕಳಿಗೆ ಉಜ್ವಲ ಭವಿಷ್ಯ ರೂಪಿಸಬೇಕೆಂಬ ಬಯಕೆಯಿಂದ ಅವರ ಪೋಷಕರು ತೋರಿಸಿದ ಧೈರ್ಯವನ್ನೂ ಪ್ರಕಟಪಡಿಸುತ್ತವೆ.

ಈ ಮೇಲಿನ ಎಲ್ಲ ಮಕ್ಕಳ ಕತೆಗಳಲ್ಲಿಯೂ ಸೂಕ್ಷ್ಮವಾದ ಒಂದು ವಿಷಯವನ್ನು ಗಮನಿಸಬೇಕು ಮಗು, ಶಿಕ್ಷಕಿ ಹಾಗೂ ಪೋಷಕರು ಎಲ್ಲರೂ ಪರಸ್ಪರ ಸಹಕಾರದಿಂದ ಒಂದು ತಂಡವಾಗಿ ಕೆಲಸ ಮಾಡಿದರು. ಈ ಎಲ್ಲಾ ಮಕ್ಕಳ ಪೋಷಕರು ತಮ್ಮ ಮಕ್ಕಳ ಶಿಕ್ಷಕರ ಬಗ್ಗೆ ಪ್ರೀತಿ, ಅಭಿಮಾನ ಹಾಗೂ ಕೃತಜ್ಞತಾಭಾವದಿಂದ ಮಾತನಾಡಿದರು. ಮಗುವಿನ ಶ್ರೇಯೋಭಿವೃದ್ಧಿಯ ಪ್ರತಿಯೊಂದು ಹಂತದಲ್ಲಿಯೂ ಶಿಕ್ಷಕರ ಮಾರ್ಗದರ್ಶನ ಅಮೂಲ್ಯವಾಗಿತ್ತು ಎಂದು ಅವರು ಹೇಳುತ್ತಾರೆ. ಶಿಕ್ಷಕರು ಮಕ್ಕಳ ಬಗ್ಗೆ ಅಪಾರವಾದ ಕಾಳಜಿ ಮತ್ತು ಪ್ರೀತಿಯನ್ನೂ ಹೊಂದಿದ್ದರು. ಪೋಷಕರ ಮಾತುಗಳನ್ನು ಸಂಪೂರ್ಣವಾಗಿ ಕೇಳಿಸಿಕೊಂಡು ಅದಕ್ಕೆ ಸ್ಪಂದಿಸುವ ಭರವಸೆಯನ್ನು ನೀಡುತ್ತಿದ್ದರು. ಪ್ರತಿಯೊಂದು ಯಶಸ್ಸಿನ ಕತೆಗಳ ಹಿಂದೆ ಹೋರಾಟ ಹಾಗೂ ನಿರಾಸೆಯ ಕತೆಗಳೂ ಇವೆ. ಶಾಲೆಯ ಒಳಗೊಳ್ಳುವ ಪ್ರಯತ್ನ ವಿಫಲವಾದ ಉದಾಹರಣೆಯಾಗಿ ನಿಶಾಳ ಕಥೆಯೂ ಒಂದು. ಆರು ವರ್ಷದ ಆ ಹುಡುಗಿಯು ಸ್ವಲೀನತೆ/ತಂತನತೆ (ಆಟಿಸಂ) ಸಮಸ್ಯೆ ಹೊಂದಿದ್ದಾಳೆಂದು ಇತ್ತೀಚೆಗೆ ಪತ್ತೆಯಾಯಿತು. ಪೋಷಕರು ಅವಳನ್ನು ಸಮನ್ವಯ ಶಿಕ್ಷಣವನ್ನು ಅನುಸರಿಸುವಒಂದು ದುಬಾರಿ ಖಾಸಗಿ ಶಾಲೆಗೆ ಸೇರಿಸಿದರು. ಆದರೆ ಆ ಶಾಲೆಗೆ ಅವಳ ಬೇಕು–ಬೇಡಗಳನ್ನು ನಿಭಾಯಿಸುವುದಕ್ಕೆ ಸಾಧ್ಯವಾಗಲಿಲ್ಲ. ಅವಳಿಗೆ ಅವಳ ಪೋಷಕರು ಹಾಗೂ ಅಜ್ಜ–ಅಜ್ಜಿಯರ ಸಹಾಯ ಮತ್ತು ಬೆಂಬಲ ತುಂಬಾ ಇದ್ದರೂ ಸಹಾ ಶಾಲೆಯವರು ಅವಳನ್ನು ಅದೇ ಶಾಲೆಯಲ್ಲಿ ಮುಂದುವರಿಸಲು ಇಷ್ಟಪಡಲಿಲ್ಲ. ಅಧಿಕ ಬೆಂಬಲ ಹಾಗೂ ನೆರವಿನ ಅಗತ್ಯವಿರುವ ಇಂತಹ ಮಕ್ಕಳು ಒಡ್ಡುವ ಸವಾಲನ್ನು ಎದುರಿಸಲು ಇಂತಹ ಶಾಲೆಗಳು ಸಿದ್ಧವಿಲ್ಲದೆ ವಿಫಲವಾಗುತ್ತಿರುವುದು ವಿಷಾದಕರ.

**ಸೇವಾಪೂರ್ವ ಶಿಕ್ಷಕ ತರಬೇತಿಯಲ್ಲಿ ಸಮನ್ವಯ ಹಾಗೂ ಆತ್ಮಾವಲೋಕನ**:

ಶಿಕ್ಷಕರ ತರಬೇತಿ ಕಾರ್ಯಕ್ರಮದಲ್ಲಿ ಶಿಕ್ಷಕರ ಆತ್ಮಾವ–ಲೋಕನವನ್ನೂ ಆ ಕುರಿತಾದ ಸಂಶೋಧನೆಯನ್ನೂ ಅಳವಡಿಸುವ ಅಗತ್ಯವಿದೆಯೇ? ಪಠ್ಯಪುಸ್ತಕಗಳಲ್ಲಾಗಲಿ ಅಥವಾ ಶಿಕ್ಷಣದ ವ್ಯವಸ್ಥೆಯಲ್ಲಾಗಲಿ ಎಲ್ಲೂ ವಿವರಣೆಯಿಲ್ಲದ ಅನೇಕ ಹೊಸ ಸನ್ನಿವೇಶಗಳನ್ನು ನಿಭಾಯಿಸುವುದಕ್ಕೆ ನಾವು ನಮ್ಮ ಹೃದಯ ಮತ್ತು ಮನಸ್ಸುಗಳನ್ನು ತೆರೆಯುವುದು ಬೇಡವೇ?

ಶಿಕ್ಷಕರ ತರಬೇತಿಯ ಸಾಂಪ್ರದಾಯಿಕ ಪದ್ಧತಿಯಲ್ಲಿ ಸೇವಾಪೂರ್ವ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ವರ್ಗಾಯಿಸಲು ಅಗತ್ಯವುಳ್ಳ ಪಠ್ಯ ವಿಷಯದ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಇತ್ತೀಚೆಗೆ ತರಬೇತಿಯ ಉದ್ದೇಶವು ಶಿಕ್ಷಕರನ್ನು ಕಲಿಕೆಗೆ ಅನುಕೂಲವನ್ನು ಕಲ್ಪಿಸುವವರನ್ನಾಗಿ ಮಾಡುವುದು ಎಂದು ಪರಿಗಣಿಸುತ್ತಾರೆ. ಇದನ್ನು ರಚನಾತ್ಮಕ ವಿಧಾನ

ಆರು ವರ್ಷದ **ಸರೋಜ್** ಒಬ್ಬ ನೇಪಾಳಿ ವಲಸೆ ಕಾರ್ಮಿಕನ ಮಗ. ಅವನು ಆಗಷ್ಟೇ ಸರಕಾರಿ ಅನುದಾನಿತ ಶಾಲೆಯೊಂದರಲ್ಲಿ ಯುಕೆಜಿಗೆ ಸೇರಿದ್ದು ಇಂಗ್ಲಿಷ್, ತಮಿಳು ಹಾಗೂ ಹಿಂದಿ ಭಾಷೆಯನ್ನು ಓದಲು, ಬರೆಯಲು ಕಲಿಯುತ್ತಿದ್ದಾನೆ. ಸಾಮಾನ್ಯವಾಗಿ ಎಲ್ಲಾ ವಲಸೆ ಮಕ್ಕಳಿಗೆ ಇರುವಂಥ ಸಮಸ್ಯೆ ಅವನಿಗೂ ಇದೆ. ಅವನು ಕಲಿಯುತ್ತಿರುವ ಯಾವ ಭಾಷೆಯೂ ಅವನ ಮನೆಯಲ್ಲಿ ಆಡುವ ಭಾಷೆಯಲ್ಲ. ಅವನ ಮಾತೃ ಭಾಷೆ ನೇಪಾಳಿ. ಅವನ ಶಿಕ್ಷಕಿ ಆತನಿಗೆ ಇಷ್ಟವಾಗಿದ್ದಾರೆ; ಅವರ ಹೆಸರು ಹೇಳುವಾಗಲೆಲ್ಲ ಅವನ ಮುಖ ಸಂತೋಷದಿಂದ ಅರಳುತ್ತದೆ.

**ರಾಮ ಮತ್ತು ಅರ್ಜುನರು** ನಾಲ್ಕು ವರ್ಷದ ವಯಸ್ಸಿನ ಅವಳಿ–ಜವಳಿಗಳು. ಚಿಕ್ಕವರಿದ್ದಾಗಲೇ ಅವರನ್ನು ದತ್ತು ಪಡೆದ ಪೋಷಕರು ಈ ಮಕ್ಕಳನ್ನು ಖಾಸಗಿ ಶಾಲೆಯೊಂದಕ್ಕೆ ಸೇರಿಸಿದ್ದಾರೆ. ಇಬ್ಬರೂ ಬೇರೆಬೇರೆ ವಿಭಾಗಗಳಲ್ಲಿ ಇದ್ದಾರೆ. ಇಬ್ಬರು ಪೋಷಕರೂ ವೃತ್ತಿಯಲ್ಲಿದ್ದಾರೆ. ಇವರ ಕುಟುಂಬ ಸಬಲವೂ, ದೊಡ್ಡದೂ ಆಗಿದ್ದರೂ ಈ ಮಕ್ಕಳನ್ನು ನೋಡಿಕೊಳ್ಳುವ ಆಳುಗಳು ಆಗಿಂದಾಗ್ಗೆ ಬದಲಾಗುತ್ತಿರುತ್ತಾರೆ. ಇದರಿಂದಾಗಿ ಇವರೊಡನೆ ಹಾಗೂ ಪೋಷಕರ ಜೊತೆ ಅಕ್ಕರೆ–ಆತ್ಮೀಯತೆ ಪಡೆಯಲು ಈ ಮಕ್ಕಳು ಕಾತರಿಸುತ್ತಿರುತ್ತವೆ. ಇವರಿಗೆ ಭಾವನಾತ್ಮಕವಾಗಿ ನಿರಾಳತೆ ಒದಗಿಸುವ ನಿಟ್ಟಿನಲ್ಲಿ ಶಿಕ್ಷಕರು ಯಶಸ್ವಿಯಾಗಿ, ಮಹತ್ವದ ಪಾತ್ರ ವಹಿಸಿದ್ದಾರೆ.

"ಏಳು ವರ್ಷಗಳ **ಕೀರ್ತನಾ** ಹುಟ್ಟಿನಿಂದಲೇ ಮೆದುಳುವಾತ (ಸೆರೆಬ್ರಲ್ ಪಾಲ್ಸಿ)ಕ್ಕೆ ಒಳಗಾದಳು. ಅವಳು ಕೈಹಿಡಿದು ನಡೆಯಲು ಪ್ರಾರಂಭಿಸಿದ ಕೂಡಲೇ ತಾಯಿ ಅವಳನ್ನು ಒಂದನೇ ತರಗತಿಗೆ ಸೇರಿಸಿದರು. ಈ ಮಗುವಿಗೆ ಸರಿಯಾಗಿ ಮಾತನಾಡಲು ಆಗುತ್ತಿಲ್ಲವಾದರೂ, ಇದರಿಂದ ತರಗತಿಯ ಚಟುವಟಿಕೆಗಳಲ್ಲಿ ಭಾಗವಹಿಸಲು ಅಡ್ಡಿಯೇನೂ ಆಗಿಲ್ಲ. ಅವಳು ಶಿಕ್ಷಕರ ಪ್ರೋತ್ಸಾಹದಿಂದ ಚಿತ್ರಕಲೆ, ನಾಟಕ ಹಾಗೂ ನೃತ್ಯದಂತಹ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿದ್ದಾಳೆ. ಶಾಲೆಯ ವಾರ್ಷಿಕೋತ್ಸವದಲ್ಲಿ ಅವಳು ವೇದಿಕೆಯಲ್ಲಿ ತನ್ನ ತರಗತಿಯನ್ನು ಪ್ರತಿನಿಧಿಸಿದಳು. ಶಾಲೆಯಲ್ಲಿ ದೊರೆಯುತ್ತಿರುವ ಬೆಂಬಲವು ಅವಳ ಬೆಳವಣಿಗೆಗೆ ತುಂಬ ಸಹಾಯ ಮಾಡಿದೆ. ಆದರೆ ಅವಳಿಗೆ ಶಾರೀರಿಕ ಸಂಬಂಧಿ ಸಮಸ್ಯೆಗಳಿದ್ದು, ಶಾಲಾವಧಿಯ ನಂತರ ಚಿಕಿತ್ಸೆ ಹಾಗೂ ಪುನಶ್ಚೇತನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ".

ಆರು ವರ್ಷದ **ಸುಮಂತ್** ಒಬ್ಬ ಬಡಗಿಯ ಮಗ. ಅವನಿಗೆ ಮೂರು ವರ್ಷಗಳಿದ್ದಾಗ ತಾಯಿ ಸ್ತನ ಕ್ಯಾನ್ಸರ್‌ನ ಶಸ್ತ್ರಚಿಕಿತ್ಸೆಗೆ ಒಳಗಾದರು. ಈಗ ಅವರು ಗುಣಮುಖರಾಗಿದ್ದಾರೆ. ಕುಟುಂಬದ ಅಲ್ಪ ಆದಾಯ ತಾಯಿಯ ಶಸ್ತ್ರಚಿಕಿತ್ಸೆಗೆ ವ್ಯಯವಾಯಿತು. ಮಗುವಿಗೆ ನಾಲ್ಕು ವರ್ಷ ಇದ್ದಾಗ ವೈಕಲ್ಯವಿದ್ದ ಅವನ ತಂದೆಗೆ ಪಾರ್ಶ್ವವಾಯು ಬಾಧಿಸಿ ನೆನಪಿನ ಶಕ್ತಿ ಕುಂದಿತು. ಇದರಿಂದ ಶರೀರವೂ ಜರ್ಜರಿತವಾಗಿ ಯಾವುದೇ ದಿನಗೂಲಿಯನ್ನು ಮಾಡುವುದೂ ಅಸಾಧ್ಯವಾಯಿತು. ಸುಮಂತ್ ಈಗ ಸರಕಾರಿ ಶಾಲೆಯೊಂದರಲ್ಲಿ ಕಲಿಯುತ್ತಿದ್ದಾನೆ. ಆ ಶಾಲೆ ಅವನಿಗೆ ಸಂತೋಷ ಕೊಡುತ್ತಿದೆ. ಶಿಕ್ಷಕಿ ಒಳ್ಳೆಯವರು ಎಂದು ಅವನು ಹೇಳುತ್ತಾನೆ. ಶಿಕ್ಷಕಿಗೆ ಅವನ ಮನೆಯ ಸ್ಥಿತಿಗತಿಯ ಅರಿವಿದೆ. ಇಂತಹ ಶಿಕ್ಷಕಿಯನ್ನು ಪಡೆದ ಸುಮಂತ್ ಅದೃಷ್ಟಶಾಲಿಯೇ ಸರಿ.

(Constructivist approach) ಎಂದು ಕರೆಯುತ್ತಾರೆ. ಶಿಕ್ಷಕರು ಬೋಧನೆಯ ಬದಲಾಗಿ ಮಗುವಿನ ಕಲಿಕೆಯನ್ನು ಬೆಂಬಲಿಸುತ್ತಾರೆ; ಅಥವಾ ಹಂತಹಂತವಾಗಿ (Scaffolds) ಮಾರ್ಗದರ್ಶನ ನೀಡುವ ಮೂಲಕ ನೆರವಾಗುತ್ತಾರೆ.(ಸೇಲರ್ ಮತ್ತು ಸ್ಯಾಟಿಕ್ 1992). ವಿಭಿನ್ನ ತರಗತಿಗಳಲ್ಲಿಯೂ ಸಾರುವೆ (Scaffolding) ಮಾದರಿಯನ್ನು ಬಳಸಲಾಗುತ್ತಿದೆ. ಈ ತರಗತಿಯಲ್ಲಿ ಬೇರೆಬೇರೆ ಕಲಿಕೆ ಮಟ್ಟದ, ಬೇರೆ ಬೇರೆ ಸಾಮರ್ಥ್ಯಗಳ ಮಕ್ಕಳಿದ್ದರೂ, ಅವರೆಲ್ಲರ ಪಠ್ಯಕ್ರಮ ಒಂದೇ ತರಹದ್ದಾಗಿರುತ್ತದೆ. ಇಂತಹ ತರಗತಿಯಲ್ಲಿ ಮಕ್ಕಳಿಗೆ ಸಮನ್ವಯ ತತ್ವವನ್ನು ಕೂಡಾ ಅನುಸರಿಸುವ ಸಲುವಾಗಿ ಮಕ್ಕಳ ವಿವಿಧ ರೀತಿಯ ಕಲಿಕೆಯ ಸಾಮರ್ಥ್ಯಗಳಿಗೆ ತಕ್ಕಂತೆ ಕಲಿಸಲು ಪಾಠದ ಸಿದ್ಧತೆ ಹೇಗಿರಬೇಕು, ಕಲಿಸುವ ವಿಧಾನ ಹೇಗಿರಬೇಕು, ಮತ್ತು ಮೌಲ್ಯಮಾಪನ ಹೇಗಿರಬೇಕು ಎಂದು ಸೇವಾಪೂರ್ವ ಶಿಕ್ಷಕರು ಯೋಜನೆಯನ್ನು ಸಿದ್ಧಪಡಿಸುತ್ತಾರೆ. ಆದರೂ ಸೇವಾಪೂರ್ವ ತರಬೇತಿ ಶಿಕ್ಷಕ ಅಥವಾ ಇತರ ಯಾವುದೇ ಶಿಕ್ಷಕರು ತಮ್ಮ ನಂಬಿಕೆಯ ವ್ಯಾಪ್ತಿಯೊಳಗೆ ಬಾರದ ವಿಚಾರಗಳನ್ನು ಮಕ್ಕಳು ತಿಳಿಯಲು ಅವಕಾಶ ನೀಡುವರೆಂದು ನಿರೀಕ್ಷಿಸಲಾಗದು. (ಬಕರ್ ಮತ್ತು ಇತರರು, 2002). ಹೃದಯದ ಕಲಿಕೆಯು ಪಠ್ಯಪುಸ್ತಕಗಳ ವಿಷಯುಗಳನ್ನು ಮೀರಿದ್ದಾಗಿದೆ. ದೃಷ್ಟಿಕೋನಗಳು, ಅಭಿಪ್ರಾಯಗಳು, ನಂಬಿಕೆಗಳು ಹಾಗೂ ಮೌಲ್ಯಗಳು ಮುಂತಾದವುಗಳನ್ನು ಹುಡುಕಿ ತಿಳಿದುಕೊಳ್ಳುವ ಬಯಕೆ ಈ ರೀತಿಯದ್ದಾಗಿದೆ. ಜಾಗೃತ ಪ್ರಜ್ಞೆಯ ಆಚೆಗೂ ವ್ಯಕ್ತಿಯನ್ನು ಕುಟುಂಬ ಹಾಗೂ ಸಮುದಾಯದ ರೂಢಿಗಳು ಹಾಗೂ ಸಾಂಸ್ಕೃತಿಕ ಮತ್ತು ಧಾರ್ಮಿಕ ಮೌಲ್ಯಗಳು ಪ್ರಭಾವಿಸುತ್ತವೆ. ಅನೇಕಬಾರಿ ಇಂತಹ ಮೌಲ್ಯಗಳು ಮತ್ತು ತತ್ವಗಳು ವ್ಯಕ್ತಿಯೊಳಗೆ ಸಂಘರ್ಷ ನಡೆಸುತ್ತಿರುತ್ತವೆ. ಆತ್ಮಾವಲೋಕನದ ವೇಳೆ ಈ ಮೌಲ್ಯಗಳೂ, ಆಲೋಚನೆಗಳೂ ಪ್ರತಿಫಲಿತವಾಗುತ್ತವೆ. ದೃಶ್ಯಕಲೆ, ಸಂಗೀತ, ನಾಟಕ ಮುಂತಾದ ಮಾಧ್ಯಮಗಳನ್ನು ಉಪಯೋಗಿಸುವುದರಿಂದ, ವಿಭಿನ್ನ ಸಾಂಸ್ಕೃತಿಕ ಗುಂಪಿನೊಂದಿಗೆ ಕೆಲಸ ಮಾಡಬೇಕಾದ ಸವಾಲುಗಳು, ಗೆಳೆಯರು ಹಾಗೂ ಸಹಪಾಠಿಗಳ ನಡುವಣ ಸಂತೋಷ, ಹೋರಾಟ, ಭಿನ್ನಾಭಿಪ್ರಾಯಗಳು ಹಾಗೂ ಸಾಮ್ಯತೆಗಳ ಕುರಿತಾದ ಚಿಂತನೆಗೆ ದಾರಿ ಮಾಡುತ್ತವೆ. ಹೀಗೆ ಮಾಡುವ ಮೂಲಕ ಯುವ ಸೇವಾಪೂರ್ವ ಶಿಕ್ಷಕರು ಗೋಚರಿಸುವ ಅಥವಾ ಅಗೋಚರ ವೈವಿಧ್ಯತೆಗಳನ್ನು ತಿಳಿದು, ಒಪ್ಪಿಕೊಂಡು ಗೌರವಿಸುವುದನ್ನು ಕಲಿಯುವುದು ಸಾಧ್ಯವಾಗುತ್ತದೆ.

ಒಂದು ತರಗತಿಯಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ಜೊತೆಗೆ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೂ ಕಲಿಸುವ ಆವಿಷ್ಕಾರದ ಕುರಿತು ಶಿಕ್ಷಕರು ಹೊಂದಿರುವ ನಂಬಿಕೆಗಳು ಹಾಗೂ ದೃಷ್ಟಿಕೋನಗಳ ಬಗ್ಗೆಯೂ ನಡೆದಿರುವ ಸಂಶೋಧನೆಗೆ ತುಂಬಾ ಮೌಲ್ಯವಿದೆ. ಇದರಿಂದ ಶಿಕ್ಷಕರ ತಯಾರಿ ಕಾರ್ಯಕ್ರಮಗಳಿಗೆ ಉಪಯೋಗವಾಗುವುದಲ್ಲದೆ ಶಾಲೆಗಳೂ ಸಹ ಪ್ರಸ್ತುತ ಸವಾಲುಗಳನ್ನು ಅರ್ಥಮಾಡಿಕೊಳ್ಳುವಂತಾಗಿ ಸೇವಾಪೂರ್ವ ಹಾಗೂ ಸೇವಾನಿರತ ಶಿಕ್ಷಕರ ತರಬೇತಿ ಮತ್ತು ಪುನರ್ಮನನ ಶಿಕ್ಷಣವನ್ನು ಸುಧಾರಿಸುವ ಮಾರ್ಗವನ್ನು ಕಂಡುಕೊಳ್ಳಲು ಸಹಾಯವಾಗುವುದು. ಶಿಕ್ಷಕರ ಕಾಳಜಿಗಳ ಬಗ್ಗೆ ಗಮನಹರಿಸಲು ಹಾಗೂ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ ಕುರಿತು ಅವರಿಗಿರುವ ಋಣಾತ್ಮಕ ದೃಷ್ಟಿಕೋನವನ್ನು ಮತ್ತು ಸಮನ್ವಯ ಶಿಕ್ಷಣದ ಬಗೆಗಿನ ಅವರ ಮನೋಧರ್ಮವನ್ನು ಸರಿಪಡಿಸಲು ಸೇವಾಪೂರ್ವ ತರಬೇತಿಯೇ ಅತ್ಯುತ್ತಮ ಸಂದರ್ಭವೆಂದು ಹೆಚ್ಚುಹೆಚ್ಚಾಗಿ ಪ್ರೋತ್ಸಾಹಿಸಲಾಗುತ್ತಿದೆ. ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ ಜೊತೆ ಕೆಲಸ ಮಾಡುವುದು, ವಿಶೇಷ ಅಗತ್ಯವುಳ್ಳವರ ಸೌಲಭ್ಯಗಳನ್ನು ಪ್ರತಿಪಾದಿಸುವವರೊಡನೆ ಸಹಕರಿಸುವುದು, ಹಾಗೂ ವೈಕಲ್ಯವುಳ್ಳವರ ವಿಶೇಷ ಅಗತ್ಯಗಳನ್ನು ಅರಿತುಕೊಳ್ಳಲು, ವರ್ತನೆಗಳನ್ನು ಮೃದುಗೊಳಿಸಲು ಮತ್ತು ಸಮುದಾಯಗಳೊಡನೆ ಸಂವಹನ ನಡೆಸುವುದರ ಜೊತೆಗೆ ನವೀನ ಕಾರ್ಯಕ್ರಮಗಳ ಮೂಲಕ ಸೇವಾಪೂರ್ವ ಶಿಕ್ಷಕರನ್ನು ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳೊಡನೆ ಸುಗಮವಾಗಿ ವ್ಯವಹರಿಸಲು ಸಿದ್ಧರಾಗುವಂತೆ ಪ್ರೋತ್ಸಾಹಿಸಲಾಗುತ್ತಿದೆ.

**ವಿದ್ಯಾರ್ಥಿಗಳ ಆತ್ಮಬಲ:**

ಮೇಲೆ ವಿವರಿಸಿದ ಮಕ್ಕಳ ಪ್ರಕರಣಗಳ ಪೈಕಿ ಮೊದಲ ನಾಲ್ವರ ವಿಷಯದಲ್ಲಿಯೂ ಶಾಲೆಯಲ್ಲಿ ಅವರಿಗೆ ಶಿಕ್ಷಕರ ಅಕ್ಕರೆ ಹಾಗೂ ಬೆಂಬಲ ದೊರೆತಿದೆ. ಪ್ರತಿಯೊಂದು ಮಗುವೂ 'ಶಿಕ್ಷಕಿ/ಕ ತನ್ನನ್ನು ತರಗತಿಯ ಒಬ್ಬ ಅಮೂಲ್ಯ ಸದಸ್ಯ ಎಂದು ಅಂಗೀಕರಿಸಿದ್ದಾರೆ' ಎಂಬ ತೃಪ್ತಿ ಸಮಾಧಾನಗಳ ಭಾವವನ್ನು ವ್ಯಕ್ತಪಡಿಸಿದೆ. ಈ ಶಿಕ್ಷಕರ ಮಾರ್ಗದರ್ಶನದಲ್ಲಿ ತಾನು ಯಶಸ್ಸು ಕಾಣುವೆನೆಂಬ ಭರವಸೆ ಆ ಪ್ರತಿಯೊಂದು ಮಗುವಿಗೂ ಇದೆ. ಪ್ರಪಂಚದಲ್ಲಿ ಒಬ್ಬ ವಿದ್ಯಾರ್ಥಿಯಾಗಿ ಆ ಪ್ರತಿಯೊಂದು ಮಗುವೂ ಆತ್ಮಬಲವನ್ನು ಪಡೆದಿದೆ. ಆದರೆ ಸ್ಥಿತಿ-ಗತಿಗಳು ಅಷ್ಟೊಂದು ಸರಳವಲ್ಲವೆಂದು ಆ ಐದನೇ ಮಗುವಿನ ಕತೆ ಹೇಳುತ್ತದೆ. ಆರೋಗ್ಯ ಮತ್ತು ಪುನಶ್ಚೇತನ ಸಂಬಂಧಿತ ಬೆಂಬಲ ಅಗತ್ಯವುಳ್ಳ ಮಕ್ಕಳಿಗೂ ಒಳಗೊಳ್ಳುವ ಸೌಲಭ್ಯದ ವ್ಯಾಪ್ತಿಯೊಳಗಡೆ ಅವಕಾಶ ಕೊಡುವುದನ್ನು ಶಿಕ್ಷಕರು ಪರಿಗಣಿಸಬೇಕೆಂದು ಐದನೇ ಮಗುವಿನ ಸ್ಥಿತಿಯು ಹೇಳುತ್ತಿದೆ. ಇಂತಹ ಮಕ್ಕಳ ವಿಷಯದಲ್ಲಿ ಮನೆಯಲ್ಲೇ ಕಲಿಸುವುದು ಸ್ವಾಗತಾರ್ಹವಾದ ಆಯ್ಕೆಯಲ್ಲ. ಯಾಕೆಂದರೆ ಆಗ ಆ ಮಗು ತನ್ನದೇ ವಯಸ್ಸಿನ ಮಕ್ಕಳ ಒಡನಾಟದಿಂದ ವಂಚಿತವಾಗುತ್ತದೆ. ಆತ್ಮಬಲವೆಂಬುದು ಆತ್ಮಗೌರವ ಅಥವಾ ಆತ್ಮಾಭಿಮಾನಕ್ಕಿಂತ ತುಂಬಾ ಭಿನ್ನವಾದದ್ದು. ಗೆಲ್ಲುವ ಸಾಮರ್ಥ್ಯ ತನಗಿದೆ ಎಂಬ ವಿಶ್ವಾಸದಲ್ಲಿ ನಂಬಿಕೆಯೇ ಆತ್ಮಬಲ. ಇದು ತನ್ನ ಕುರಿತೇ ತನ್ನ ತೀರ್ಮಾನ ಅಥವಾ ಮೌಲ್ಯಮಾಪನಕ್ಕೆ ಸಂಬಂಧಪಟ್ಟಿದೆ. ಆತ್ಮಬಲವು ಯಾವುದೇ ಕಾರ್ಯದಲ್ಲಿ ವ್ಯಕ್ತಿಯನ್ನು ಗೆಲುವಿನತ್ತ ಪ್ರಚೋದಿಸಿ ಪ್ರೇರೇಪಿಸುತ್ತದೆ. ಪರಿಣಾಮವಾಗಿ ವ್ಯಕ್ತಿಗೆ ತನ್ನ ಬಗ್ಗೆಯೇ ಇರುವ ಅಭಿಪ್ರಾಯಗಳು ಬದಲಾಗುತ್ತ ಸಾಗುತ್ತದೆ.

ನಿರ್ದಿಷ್ಟ ಸನ್ನಿವೇಶದಲ್ಲಿ ತನ್ನ ಕಾರ್ಯದ ಪರಿಣಾಮ ಏನು ಎಂಬುದರ ಬಗ್ಗೆ ವ್ಯಕ್ತಿಗೆ ಇರುವ ನಂಬಿಕೆಯೇ 'ಆತ್ಮಬಲ' ಎಂದು ವ್ಯಾಖ್ಯಾನಿಸಬಹುದಾಗಿದೆ. ಒಂದು ಕಾರ್ಯವನ್ನು 'ನಾನು ಮಾಡಬಲ್ಲೆ' ಎಂಬ ಆತ್ಮಬಲವಿದ್ದರೆ ಆ ಕಾರ್ಯ ಸಾಧನೆಗೆ ಹೆಚ್ಚಿನ ಪ್ರೇರಣೆ ದೊರೆಯುತ್ತದೆ.

ನಮ್ಮ ಆತ್ಮಬಲ ಜಾಸ್ತಿಯಿರುವ ಕ್ಷೇತ್ರದಲ್ಲಿ ಅಥವಾ ಕಾರ್ಯದಲ್ಲಿ ಆಯಾ ಕ್ಷೇತ್ರದ ಆದರ್ಶಪ್ರಾಯ ವ್ಯಕ್ತಿಯನ್ನು ಅನುಕರಿಸುವ ಸಾಧ್ಯತೆ ಜಾಸ್ತಿ ಇರುತ್ತದೆ. ಆತ್ಮಬಲವು ಜ್ಞಾನದಿಂದ ಪ್ರೇರಿತವಾಗುವ ಒಂದು ಆಲೋಚನಾ ವಿನ್ಯಾಸವಾಗಿದೆ. ಅದು ವಂಶವಾಹಿಯಿಂದ ಬರುವಂತಹದ್ದಲ್ಲ. ಅನುಕರಿಸುವ ಸಾಮರ್ಥ್ಯವು ಬಾಲ್ಯದಿಂದಲೇ ಪ್ರಾರಂಭಗೊಂಡು ಬದುಕಿನುದ್ದಕ್ಕೂ ಮುಂದುವರೆಯುತ್ತದೆ. ಬಂಡೂರರ ಪ್ರಕಾರ ಆತ್ಮಬಲವು ಬಾಲ್ಯದಲ್ಲಿ ಆದರ್ಶ-ಪ್ರಾಯರಾದ ಮಾದರಿ ವ್ಯಕ್ತಿಗಳನ್ನು ನೋಡುವ ಮೂಲಕ ಮತ್ತು ಸ್ವಂತ ಧನಾತ್ಮಕ ಯಶಸ್ಸಿನ ಅನುಭವದ ಮೂಲಕ ಮಕ್ಕಳಲ್ಲಿ ಬೆಳೆಯುತ್ತದೆ. (ಬಂಡೂರ 1977). ಆದ್ದರಿಂದ ಅಧಿಕ ಆತ್ಮಬಲವನ್ನು ಮತ್ತು ಮನೋಸ್ಥೈರ್ಯವನ್ನು ಹೊಂದಿದ್ದು, ತನ್ನ ಕಾರ್ಯದ ಪರಿಣಾಮಗಳನ್ನು ಅಭಿವೃದ್ಧಿಪಡಿಸುವ ಮತ್ತು ಅವುಗಳ ಮೇಲೆ ನಂಬಿಕೆ ಹೊಂದಿರುವ ಹೆಚ್ಚಿನ ಶಿಕ್ಷಕರು ತಮ್ಮ ಯಶಸ್ಸಿನ ಕುರಿತು ನಂಬುವ ಆತ್ಮವಿಶ್ವಾಸದ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಾರೆ. (ಲಾ ಮತ್ತು ಇತರರು 2010). ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಕರ ಪ್ರವೇಶವು ಅವರ ಆತ್ಮಗೌರವ, ಆತ್ಮವಿಶ್ವಾಸ

ಹಾಗೂ ಮಾನಸಿಕ ನೆಮ್ಮದಿಯ ಭಾವವನ್ನು ಹೆಚ್ಚಿಸುತ್ತದೆ ಎಂದು ಆತ್ಮಬಲದ ಕುರಿತು ನಡೆಸಿದ ಸಂಶೋಧನೆಗಳು ತೋರಿಸಿವೆ. ಆತ್ಮಗೌರವವೆಂಬುವುದು ಒಬ್ಬನು ತನ್ನ ಬಗ್ಗೆಯೇ ಹೊಂದಿರುವ ಅಭಿಪ್ರಾಯವಾಗಿದೆ. ಆತ್ಮಗೌರವವೆಂಬುವುದು ಸಾಮಾನ್ಯವಾಗಿ ಸ್ಥಿರವಾದ ಭಾವವಾಗಿದ್ದರೂ ಸೋಲು–ಗೆಲುವುಗಳು ಅದರ ಮೇಲೆ ಪರಿಣಾಮ ಬೀರುತ್ತವೆ. ವಯಸ್ಕರಾದವರು ಕೂಡಾ ಸಾಧನೆ ಮಾಡಿದಾಗ ಹಿಗ್ಗುವುದು, ಸೋಲು ಬಂದಾಗ ಕುಗ್ಗುವುದು ಸಾಮಾನ್ಯ ಸಂಗತಿಯಾಗಿದೆ. ಹೀಗಿರುವಾಗ ಒಂದು ಮಗುವನ್ನು ಗುಂಪಿನಿಂದ ದೂರ ಇರಿಸಿದರೆ, ಕಳಂಕ ಹಚ್ಚಿದರೆ, ನಿರ್ಲಕ್ಷ್ಯಕ್ಕೆ ಒಳಪಡಿಸಿದರೆ ಅಥವಾ ನಿಂದನೆಗೆ ಗುರಿಪಡಿಸಿದರೆ ಅಂತಹ ಮಗುವಿಗೆ ಆಗುವಂತಹ ನೋವು ಹಾಗೂ ಮಾನಸಿಕ ಆಘಾತ ಅದರ ಆತ್ಮಗೌರವವನ್ನು ಎಷ್ಟು ಕುಗ್ಗಿಸಬಹುದೆಂದು ನಾವು ಯೋಚಿಸಬಹುದು.

**ಉಪಸಂಹಾರ:**

ಸಮನ್ವಯ ಶಿಕ್ಷಣದಲ್ಲಿ ಪಾತ್ರವಹಿಸಲು ಅಗತ್ಯವಿರುವ ಆತ್ಮಬಲವನ್ನು ನೀಡಿ ತರಬೇತಿ ಹೊಂದುತ್ತಿರುವ ಭಾವಿ ಶಿಕ್ಷಕರನ್ನು ತಯಾರು ಮಾಡುವಲ್ಲಿ ಸೇವಾಪೂರ್ವ ಶಿಕ್ಷಕ ತರಬೇತಿಯು ಮಹತ್ವದ ಪಾತ್ರವನ್ನು ವಹಿಸಬಲ್ಲುದು. ನುರಿತ ಶಿಕ್ಷಕ ತರಬೇತಿದಾರರ ಹಾಗೂ ತಜ್ಞರ ಮಾರ್ಗದರ್ಶನದಲ್ಲಿ, ಬೆಂಬಲಿಸುವ ಮೌಲ್ಯಗಳನ್ನು ಹಾಗೂ ನಂಬಿಕೆಯ ಪದ್ಧತಿಯನ್ನು ಸೃಜನಶೀಲ ಕಲೆಗಳ ಮೂಲಕ ಶೋಧಿಸಿದಾಗ ಆಳವಾದ ಆಲೋಚನೆಗೂ, ಚಿಂತನೆಗೂ ಅವಕಾಶ ಉಂಟಾಗುತ್ತದೆ. ಅಲ್ಲದೆ, ತಾವೇ ವಿಶೇಷ ಅಗತ್ಯವುಳ್ಳವರೂ ಆಗಿರುವ ಸ್ವ–ಪ್ರತಿಪಾದಕರ ಜೊತೆಗಿನ ಸಂವಹನದಿಂದ ಪರಸ್ಪರ ಸಂಬಂಧ, ಸ್ನೇಹಾಚಾರಗಳನ್ನು ಬೆಳೆಸುವ ಮೂಲಕ, ಭಯ ಮತ್ತು ಅಜ್ಞಾನದಿಂದಲೂ ಸೃಷ್ಟಿಯಾದ ದೃಷ್ಟಿ–ಕೋನ ಸಂಬಂಧಿಯಾದ ಅಡೆ–ತಡೆಗಳು ನಿವಾರಣೆಯಾಗುತ್ತವೆ. ಸಮನ್ವಯ ಶಿಕ್ಷಣ ಕಾರ್ಯಕರ್ತರಿಗೆ ಅಗತ್ಯವುಳ್ಳ ಶೋಧಕ ಮನೋಭಾವವನ್ನು ಆತ್ಮಾವಲೋಕನವು ಒದಗಿಸುತ್ತದೆ. ಈ ರೀತಿಯ ಸಮನ್ವಯ ಶಿಕ್ಷಣ ತರಬೇತಿಯ ಶಿಕ್ಷಕರು, ಕಲಿಕೆಗೆ ಅನುಕೂಲ ಒದಗಿಸುವವರು, ಪ್ರೇರಕರು ಹಾಗೂ ಪುನಶ್ಚೇತನ ಮಾರ್ಗದರ್ಶಕರು ಮುಂತಾದ ಎಲ್ಲಾ ಪಾತ್ರಗಳನ್ನು ಒಬ್ಬರೇ ನಿರ್ವಹಿಸಬೇಕಾದುದರಿಂದ ಸೇವಾಪೂರ್ವ ಶಿಕ್ಷಕ ತರಬೇತಿಯು ಪಠ್ಯವಿಷಯ ಜ್ಞಾನಕ್ಕಿಂತ ಮುಂದಕ್ಕೆ ಹೋಗಬೇಕು; ಆತ್ಮಬಲವನ್ನು ತಂದುಕೊಡಬಲ್ಲ ಸಾಮರ್ಥ್ಯವನ್ನು ಅಭ್ಯರ್ಥಿಗಳಲಿ ರೂಪಿಸಬಲ್ಲ ತರಬೇತಿಗಳನ್ನು ಅದು ಒಳಗೊಳ್ಳಬೇಕಿದೆ ಸಾಮಾನ್ಯ ತರಗತಿಗಳಲ್ಲಿ ಅತ್ಯಧಿಕ ಬೆಂಬಲದ ಅಗತ್ಯವುಳ್ಳ ಮಕ್ಕಳನ್ನು ಸೇರಿಸಿಕೊಳ್ಳಲು ಆತ್ಮಾವಲೋಕನದ ಪ್ರಕ್ರಿಯೆಯ ಮೂಲಕ ಅವಕಾಶ ನೀಡುವುದು ಅತ್ಯಗತ್ಯವಾಗಿದೆ. ಉತ್ತಮ ಆತ್ಮಬಲವುಳ್ಳವರು ತಾವು ಮಾಡುವ ಕೆಲಸದಲ್ಲಿ ಗಾಢವಾದ ಆಸಕ್ತಿಯನ್ನು ಮತ್ತು ಬದ್ಧತೆಯನ್ನೂ ಬೆಳೆಸಿಕೊಳ್ಳುತ್ತಾರೆ; ಅವರು ಸವಾಲುಗಳಿಗೆ ಅಂಜಿ ಹಿಂದೆ ಸರಿಯುವ ಸಾಧ್ಯತೆ ತುಂಬಾ ಕಡಿಮೆ; ಜೊತೆಗೆ ಸೋಲುಗಳಿಂದಲೂ ಬಹು ಬೇಗ ಚೇತರಿಸಿಕೊಳ್ಳುತ್ತಾರೆ ಎಂದು ಬಂಡೂರ ಪ್ರತಿಪಾದಿಸುತ್ತಾರೆ. ಗುಣನಡತೆ ಬದಲಾವಣೆಯಲ್ಲಿಯೂ ಆತ್ಮಬಲವು ಮಹತ್ವದ ಪಾತ್ರವನ್ನು ವಹಿಸುತ್ತದೆ.

***References***


Ainscow, M.Booth, T. and Dyson, A. (2006). *Improving Schools, Developing Inclusion*, First Edition. London: Routledge.

Bakker, J.P., Aloia, G.F. and Aloia, S.F. (2002). *Preparing Teachers for All Students* in F.E. Obiakor, P.A. Grant and E.A.Dooley (eds). Educating All Learners: Refocusing on the Comprehensive Support Model, Springfield, IL: Charles C. Thomas.

Bandura, A. (1977). *Self- efficacy: toward a unifying theory of behavioural change*. Psychol Rev 84:191-215.

Burnaford, G., Fischer, J. and Hobson, D. (2001) *Teachers Doing Research, The Power of Action through Inquiry*, Second Edition, New Jersey: Lawrence Erlbaum Associates Inc.

Eisner E.W. (1985). *The Educational Imagination: On the Design and Evaluation of School Programs* (4th Edition) New York: Macmillan.

Forlin C, and Ming-Gon J.L. Ed. (2008) *Reform, Inclusion and Teacher Education*, Routledge.

Fuchs W.W. *Examining Teachers' Perceived Barriers Associated with Inclusion*, SRATE Journal Winter 2009-2010, Vol. 19, 1. https://files.eric.ed.gov/fulltext/EJ948685.pdf

Law A. Halkiopoulos C. and Brayan-Zaykov C. (2010). *Psychology*, Malaysia: Pearson Education Ltd.

Sailor, W. and Skrtic, T.M. (1996). *School/Community Partnerships and Educational Reform*, Remedial and Special Education, 17.

Schon, D. (1983). *The Reflective Practitioner*, New York: Basic Books.

Snyder C.R., Lopez S.J., and Pedrotti J.T. (2011) *Positive Psychology*, Second Edition, Sage Publications India Pvt Ltd.

UNESCO (2017) *A Guide for Ensuring Inclusion and Equity in Education*. https://unesdoc.unesco.org/ark:/48223/pf0000248254/PDF/248254eng.pdf.multi.nameddest=305_17%20Ensuring%20Inclusion_int_21_28_en.indd%3A.178893%3A656





**ಅನುರಾಧ ನಾಯ್ಡು** ಅವರು ಹಾಂಗ್‌ಕಾಂಗ್‌ನಲ್ಲಿ ೦–೬ ವಯೋಮಾನದ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಆರಂಭಿಕ ಮಧ್ಯವರ್ತಿಕಾರರಾಗಿ (Early Interventionist)) ಕೆಲಸ ಮಾಡಿದರು. ಆರಂಭಿಕ ಶಿಕ್ಷಣ ಕೇಂದ್ರದ ಆಶ್ರಯದಲ್ಲಿ ಹಾಂಗ್‌ಕಾಂಗ್ ಸರಕಾರದ ನೆರವಿನಿಂದ ಚೀನೀಯೇತರ ಭಾಷಿಕ ಮಕ್ಕಳಿಗಾಗಿ ಸೇವೆ ಸಲ್ಲಿಸಿದರು. ಅನುರಾಧ ಅವರು ೨೦ ವರ್ಷಗಳ ಹಿಂದೆ ಚೆನ್ನೈನ ವಿದ್ಯಾಸಾಗರ್‌ನಲ್ಲಿ ವಿಶೇಷ ಶಿಕ್ಷಕಿಯಾಗಿ ತರಬೇತಿ ಪಡೆದರು. ಮತ್ತು ಅಲ್ಲಿ Transdisciplinary ವಿಧಾನವನ್ನು ಪರಿಚಯಿಸಿದರು. ಅವರು ವಿದ್ಯಾರ್ಥಿಗಳಿಗೆ ಚಿಕಿತ್ಸೆ, ಶಿಕ್ಷಣ ಹಾಗೂ ಪರ್ಯಾಯ ಸಂಪರ್ಕ ವಿಧಾನಗಳಿಂದ ಕೂಡಿದ ಉಲ್ಲಾಸಭರಿತ ಶಿಕ್ಷಣವನ್ನು ನಿರಂತರವಾಗಿ ಒದಗಿಸುತ್ತ ಅನುಭವ ಪಡೆದಿದ್ದಾರೆ. ಸದ್ಯ ಅವರು ವಿದ್ಯಾಸಾಗರ್‌ನ ಬಿ.ಎಡ್.ತರಗತಿಗೆ ಅರೆಕಾಲಿಕ ಉದ್ಯೋಗಿಯಾಗಿ ಮನಶ್ಶಾಸ್ತ್ರವನ್ನು ಕಲಿಸುತ್ತಿದ್ದಾರೆ; ಅಲ್ಲದೆ ಚೆನ್ನೈನ ಮಹಿಳಾ ಕ್ರಿಶ್ಚಿಯನ್ ಕಾಲೇಜಿನ ಮನಶ್ಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ. ಅವರನ್ನು anuradha.naidu@gmail.com ನಲ್ಲಿ ಸಂಪರ್ಕಿಸಬಹುದು.



ಅನುವಾದ: **ಜಿ.ಕೆ. ಮಧ್ಯಸ್ಥ** । ಪರಿಶೀಲನೆ: **ಲತಾ ಕೆ ಸಿ**